456 (872) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :- ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ದಿವಾನ್ ರಸ್ತೆಯಲ್ಲಿರುವ (ಚಾಮುಂಡಿ ಅತಿಥಿಗೃಹದ ಹಿಂಭಾಗದ ರಸ್ತೆ ನಲ್ಲಪ್ಪ ಠಾಣಾ ಪೊಲೀಸಾ ಠಾಣೆ ಇರುವ ಜಾಗ ಲೋಕೋಪಯೋಗಿ ಇಲಾಖೆಗೆ ಸೇರಿದೆಯೇ;

ಆ) ಹಾಗಿದ್ದಲ್ಲಿ ಈ ಜಾಗದ ವಿಸ್ತೀರ್ಣ ಎಷ್ಟು; ಈ ಜಾಗದಲ್ಲಿರುವ ಕಟ್ಟಡಗಳು ಹಾಗೂ ಕಟ್ಟಡಗಳಲ್ಲಿರುವ ಇಲಾಖೆ/ಕಛೇರಿಗಳೆಷ್ಟು (ವಿವರ ನೀಡುವುದು);

ಇ) ಈ ಜಾಗದ ಸಮಗ್ರ ಅಭಿವೃದ್ಧಿಯ ಬಗ್ಗೆ ಸರ್ಕಾರ ಯಾವ ಕ್ರಮ ವಹಿಸುವುದು ಈ ಜಾಗದಲ್ಲಿರುವ ಕಟ್ಟಡಗಳ ಅಭಿವೃದ್ಧಿಗೆ ಜಾಗದ ರಕ್ಷಣೆಗೆ ಕಾಂಪೌಂಡ್ ನಿರ್ಮಿಸುವುದಕ್ಕೆ ಆಗುವ ವೆಚ್ಚವೆಷ್ಟು;

ಈ) ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವುದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹೌದು.

ಆ) ಈ ಜಾಗದ ವಿಸ್ತೀರ್ಣವು 10738.21 ಚದರ ಮೀಟರ್ (85.70 x 125.30 ಮೀ) ಇರುತ್ತದೆ. ಈ ಜಾಗದಲ್ಲಿ 12 ವಸತಿಗೃಹಗಳಿದ್ದು, ಇವುಗಳ ಪೈಕಿ 3 ವಸತಿ ಗೃಹಗಳು ಮಾತ್ರ ವಾಸಿಸಲು ಯೋಗ್ಯವಾಗಿದ್ದು, ಇವುಗಳಲ್ಲಿ ಲೋಕೋಪಯೋಗಿ ಇಲಾಖೆ ಸಿಬ್ಬಂದಿ ವರ್ಗದವರು ವಾಸಿಸುತ್ತಿದ್ದಾರೆ. ಉಳಿದ ಹಳೆಯ ಕಟ್ಟಡಗಳನ್ನು ಮೈಸೂರಿನ ನಲ್ಲಪಟ್ಟಣ ಸಂಚಾರಿ ಪೊಲೀಸ್ ವೃತ್ತ ಕಛೇರಿಗಾಗಿ ಉಪಯೋಗಿಸಲಾಗುತ್ತಿದೆ. ಇದಲ್ಲದೆ ಇ.ಎಸ್.ಐ ಆಸ್ಪತ್ರೆಯ ಹೊಸ ಕಟ್ಟಡವು ಸಹ ಇರುತ್ತದೆ.

ಇ) ಈ ಜಾಗದಲ್ಲಿ 1671.61 ಚದರ ಮೀಟರ್ (45.71 x 36.57 ಮೀಟರ್) ಜಾಗವನ್ನು ವಾಣಿಜ್ಯ ತೆರಿಗೆ ಇಲಾಖೆಯ ಕಟ್ಟಡ ನಿರ್ಮಾಣಕ್ಕೆ ಹಾಗೂ 7470.00 ಚದರ ಮೀಟರ್ (83.00 x 90.00 ಮೀಟರ್) ಜಾಗವನ್ನು ಡಾ॥ ಅಂಬೇಡ್ಕರ್ ಭವನ ಕಟ್ಟಡ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿದೆ. ಇದಲ್ಲದೆ 125.35 ಚದರ ಮೀಟರ್ ವಿಸ್ತೀರ್ಣದ (23.5 x 18.1 ಮೀಟರ್) ಜಾಗವನ್ನು ಇಎಸ್ಐ ಆಸ್ಪತ್ರೆಯ ಕಟ್ಟಡಕ್ಕಾಗಿ ಹಸ್ತಾಂತರಿಸಲಾಗಿದೆ.

ಈ ಜಾಗದ ರಕ್ಷಣೆಗೆ ಕಾಂಪೌಂಡ್ ನಿರ್ಮಿಸಿ ಗೇಟ್‌ಗಳನ್ನು ಅಳವಡಿಸಲು ರೂ.20.00 ಲಕ್ಷಗಳು ವೆಚ್ಚವಾಗುತ್ತದೆ.

ಈ) ಅನುದಾನದ ಲಭ್ಯತೆಯನ್ನಾಧರಿಸಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

457 (873) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) :- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಹಾನಗರ ಪಾಲಿಕೆಗೆ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಯಾವ ಯಾವ ಬಡಾವಣೆಗಳನ್ನು ಯಾವ ಯಾವ ಇಸವಿಯಂದು ಹಸ್ತಾಂತರಿಸಿದೆ;

ಆ) ಈ ರೀತಿ ಹಸ್ತಾಂತರಿಸಿರುವ ಬಡಾವಣೆಗಳಲ್ಲಿರುವ ಪಾರ್ಕ್‌ಗಳು ಹಾಗೆ ಹಸ್ತಾಂತರಿಸಿರುವ ಬಡಾವಣೆಗಳಲ್ಲಿ ಪಾರ್ಕ್‌ಗಳಿಗೆ ಮೀಸಲಿಟ್ಟಿರುವ ಜಾಗಗಳ ವಿವರ ನೀಡುವುದು;

ಇ). ಹಸ್ತಾಂತರವಾದ ನಂತರವೂ ಯಾವ ಯಾವ ಪಾರ್ಕ್‌ಗಳಿಗೆ ಬೇಲಿ ನಿರ್ಮಿಸದಿರುವ, ಅಭಿವೃದ್ಧಿ ಕಾಮಗಾರಿ ಆಗದ ಪಾರ್ಕ್‌ಗಳೆಷ್ಟು;

ಈ) ಈ ಪಾರ್ಕ್‌ಗಳ ಅಭಿವೃದ್ಧಿ ಕಾಮಗಾರಿಯ ಅನುಷ್ಠಾನದ ಜವಾಬ್ದಾರಿ ಮೈಸೂರು ಮಹಾನಗರ ಪಾಲಿಕೆಯದ್ದೊ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ್ದೋ;

ಉ) ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಯವರು) :

ಅ)

1) 1992ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲ್ಪಟ್ಟಿರುವ ಬಡಾವಣೆಗಳ ವಿವರ :

1) ಗೋಕುಲಂ 2ನೇ ಹಂತ

2) ಬೃಂದಾವನ ಬಡಾವಣೆ 1 ಮತ್ತು 2ನೇ ಹಂತ

3) ಮೇಟಿಗಳ್ಳಿ ಬಡಾವಣೆ

4) ಗಾಯಿತ್ರಿಪುರಂ 1ನೇ ಹಂತ

5) ಬನ್ನಿಮಂಟಪ 'ಬಿ' ಬಡಾವಣೆ